# ವಿಶ್ವ ದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ

18-10-2025 | ಶನಿವಾರ | ಸಂಪುಟ-3 | ಸಂಚಿಕೆ- 1 | ಪುಟಗಳು-2


## ನುಡಿಮುತ್ತು

ಸಾಧ್ಯವೇ ಇಲ್ಲಾ ಎಂದುಕೊಂಡರೆ ಏನನ್ನು ಸಾಧಿಸಲಾಗದು..!!

ಪ್ರಯತ್ನಿಸುವುದರಿಂದ ನಷ್ಟವೇನಿದೆ ? ಗೆದ್ದರೆ ಸಂತೋಷವಾಗುತ್ತದೆ.

ಸೋತರೆ ಅನುಭವ ಸಿಗುತ್ತದೆ.

– ಸ್ವಾಮಿ ವಿವೇಕಾನಂದ



## ಕಣ್ಣೀರ ಕೂಪದಲ್ಲಿ ಶರಾವತಿ

ಶರಾವತಿ ಕಣಿವೆ ಮತ್ತು ಶರಾವತಿ ಅಭಯಾರಣ್ಯ ಪಶ್ಚಿಮ ಘಟ್ಟದ ಅತ್ಯಂತ ಸೂಕ್ಷ್ಮ ಜೀವ ವೈವಿಧ್ಯತೆ ಹೊಂದಿರುವ ತಾಣ. ಆವಾಸ ಸ್ಥಾನವು ಹೌದು. ಆದರೆ ಇಂತಹ ಭೂ ಲೋಕದ ಸ್ವರ್ಗವನ್ನು ವಿರೂಪಗೊಳಿಸುವ ಕಾರ್ಯಕ್ಕೆ ಸರ್ಕಾರ ಮುಂದಾಗಿರುವುದು ದುರದೃಷ್ಟಕರ ಸಂಗತಿ. ತೀರ್ಥಹಳ್ಳಿ ತಾಲೂಕು ಅಂಬುತೀರ್ಥದಲ್ಲಿ ಹುಟ್ಟಿ128 ಕಿ. ಮೀ. ಪಶ್ಚಿಮಘಟ್ಟದಲ್ಲಿ ಹುಟ್ಟಿ ಪಶ್ಚಿಮ ದಿಕ್ಕಿಗೆ ಹರಿಯುವ ರಾಜ್ಯದ ಪ್ರಮುಖ ನದಿಗಳಲ್ಲಿ ಒಂದಾಗಿದೆ. ಪಶ್ಚಿಮಘಟ್ಟದಿಂದ ಆವೃತವಾದ ಶರಾವತಿ ಕಣಿಯ 2985 ಚದರ ಕಿ. ಮೀ. ಪ್ರದೇಶದಲ್ಲಿ 200 ಸಸ್ಯ ಪ್ರಭೇದಗಳು,130 ಚಿಟ್ಟೆ ಪ್ರಭೇದಗಳು ಹಾಗೂ ಅನೇಕ ಜೀವವೈವಿಧ್ಯ ಹೊಂದಿದೆ. ರಾಜ್ಯದ ಅತಿ ದೊಡ್ಡ ಜಲಾಶಯವಾದ ಲಿಂಗನಮಕ್ಕಿ, ತಲಕಳಲೆ, ಗೇರುಸೊಪ್ಪ ಜಲಾಶಯಗಳು, 6 ಬೃಹತ್ ವಿದ್ಯುತ್ ಉತ್ಪಾದನಾ ಕೇಂದ್ರಗಳು, 5 ಸುರಂಗಗಳು ಅಪಾರವಾದ ಜನವಸತಿ ಪ್ರದೇಶವಿದೆ. ಶಿರೂರು ಮತ್ತು ಕೇರಳದ ವಯನಾಡಿನಲ್ಲಿ ಇತ್ತೀಚಿಗೆ ಸಂಭವಿಸಿದ ಪ್ರಕೃತಿ ವಿಕೋಪದ ಬೆನ್ನಲ್ಲೇ ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ಸರಕಾರ ಮುಂದಾಗಿದೆ.

ಶರಾವತಿ ಪಂಪ್ ಯೋಜನೆಯನ್ನು 2016ರಲ್ಲಿ ರೂಪಿಸಿದ್ದರು.2017ರಲ್ಲಿದ್ದ ರಾಜ್ಯ ಸರ್ಕಾರವು ಅನುಮೋದನೆ ನೀಡಿತು. ಈ ಯೋಜನೆಗೆ ಆಗಸ್ಟ್ 2024ರಲ್ಲಿ ಕೇಂದ್ರ ವಿದ್ಯುತ್ ಪ್ರಾಧಿಕಾರಿವು ಅನುಮೋದನೆ ನೀಡಲಾಯಿತು. ಜೋಗ ಸಮೀಪದ ತಲಕಳಲೆ ಜಲಾಶಯ ಮತ್ತು ಗೇರುಸೊಪ್ಪ ಜಲಾಶಯಗಳ ನಡುವೆ ಶರಾವತಿ ಕಣಿವೆ ಸಿಂಗಳಿಕ ಅಭಯಾರಣ್ಯದ ಭೂಗರ್ಭ ಸುರಂಗದಲ್ಲಿ ವಿದ್ಯುತ್ ಉತ್ಪಾದನ ಘಟಕ ನಿರ್ಮಿಸಲಾಗುತ್ತದೆ. ತಲೆಕಳಲೆ ಜಲಾಶಯದಿಂದ ಉತ್ಪಾದನ ಘಟಕಕ್ಕೆ ನೀರು ಹರಿಸಿ 2ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತದೆ. ಗೇರುಸೊಪ್ಪ ಜಲಾಶಯ ಸೇರುವ ನೀರನ್ನು ಮತ್ತೆ ತಲೆ ಕೆಳಗೆ ಪಂಪ್ ಮಾಡಲಾಗುತ್ತದೆ. ಅಂದರೆ ನೀರನ್ನು ಸಮುದ್ರ ಸೇರಲು ಬಿಡದೆ ಮತ್ತೆ ಮತ್ತೆ ಅದೇ ನೀರಿನಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತದೆ. ಯೋಜನೆ ಡಿ.ಪಿ.ಆರ್.ಗೆ ಕೇಂದ್ರದ ವಿದ್ಯುತ್ ಪ್ರಾಧಿಕಾರ ಒಪ್ಪಿಗೆ ಸೂಚಿಸಿದೆ. ರಾಜ್ಯಸರಕಾರ ಕಾಮಗಾರಿಗೆ ತರಾತುರಿಯಲ್ಲಿ 10,240 ಕೋಟಿ ರೂ.ಗೆ ಟೆಂಡರ್ ಸಹ ಕರೆದಿದೆ. ಯೋಜನೆಗೆ 14 ಕಿ. ಮೀ ಉದ್ದದ ಹಾಗೂ 30ಅಡಿ ವ್ಯಾಸದ ಸುರಂಗ ಕೊರೆಯಲಾಗುತ್ತದೆ. ಇದಕ್ಕೆ 18,000 ಟನ್ ಅಪಾಯಕಾರಿ ಕೈಗಾರಿಕಾ ಸ್ಫೋಟಕಗಳನ್ನು ಬಳಸಲಾಗುತ್ತದೆ ಎಂದು ಹೇಳಲಾಗಿದೆ.ಇಷ್ಟು ಪ್ರಮಾಣದ ಸ್ಫೋಟಕಗಳನ್ನು ಬಳಸುವುದರಿಂದ ಆಗುವ ಹಾನಿಯನ್ನು ಪರಿಸರ ಪರಿಣಾಮ ಮೌಲ್ಯಮಾಪನದಲ್ಲಿ ಚರ್ಚಿಸಿರುವುದಿಲ್ಲ. ಇದು ನೇರವಾಗಿ 'ಅಪಾಯಕಾರಿ ಮತ್ತು ಇತರೆ ತ್ಯಾಜ್ಯ'ಗಳ ನಿಯಮ 2016ರ ಸ್ಪಷ್ಟ ಉಲ್ಲಂಘನೆಯಾಗಿದೆ. ಸುರಂಗ ನಿರ್ಮಿಸಲು ಸ್ಫೋಟಕಗಳನ್ನು ಬಳಸಲಾಗುತ್ತದೆ. ಸ್ಫೋಟಕ ಬೆರೆತ ವಿಷಭರಿತ 12 ದಶಲಕ್ಷ ಟನ್‌ಗಳಷ್ಟು ತ್ಯಾಜ್ಯ ಸೃಷ್ಟಿಯಾಗಲಿದೆ. ತ್ಯಾಜ್ಯವನ್ನು ನಿರ್ವಹಣೆ ಮಾಡುವ ವಿಧಾನ, ವಿಲೇವಾರಿ ಮಾಡುವ ವಿಧಾನವನ್ನು ಮುಚ್ಚಿಡಲಾಗಿದೆ. ವಿಷತ್ಯಾಜ್ಯ ಶರಾವತಿ ನದಿ, ಅಂತರ್ಜಲ ಮತ್ತು ತೊರೆಗಳಿಗೆ ಸೇರಿ ಜಲಚರಗಳಿಗೆ, ಕೃಷಿ ಕ್ಷೇತ್ರಕ್ಕೆ, ಕುಡಿಯುವ ನೀರಿನ ಮೂಲಕ್ಕೆ ಮತ್ತು ಒಟ್ಟಾರೆಯಾಗಿ ಸಾರ್ವಜನಿಕ ಆರೋಗ್ಯದ ಮೇಲಾಗುವ ಪರಿಣಾಮವನ್ನು ಸರ್ಕಾರ ಗುಟ್ಟಾಗಿಡಲಾಗಿದೆ.

ಪುಟ 2ರಲ್ಲಿ...

# ವಿಶ್ವವನ್ನೇ ಕಾಡುತ್ತಿರುವ ಸ್ತನ ಕ್ಯಾನ್ಸರ್ ಮಾರಿ..!



ಕ್ಯಾನ್ಸರ್ ಎಂಬುದು ವಿಶ್ವವನ್ನೆ ಬಾಧಿಸಿದ ಮಹಾಮಾರಿ. ಅದರಲ್ಲಿಯೂ ಸ್ತನ ಕ್ಯಾನ್ಸರ್ ಎಂಬುದು ಹೆಚ್ಚಾಗಿ ಕಾಡುತ್ತಿದೆ. ಡಬ್ಲ್ಯೂ.ಎಚ್.ಒ 2022ರ ವರದಿಯ ಪ್ರಕಾರ ಜಗತ್ತಿನ 157 ಅಧಿಕ ರಾಷ್ಟ್ರಗಳಲ್ಲಿ ಸ್ತನ ಕ್ಯಾನ್ಸರ್ ಎಂಬುದು ಸಾಮಾನ್ಯವಾಗಿದೆ. ಈ ರೋಗದ ಕುರಿತು ಜನರಲ್ಲಿ ಅರಿವು ಮೂಡಿಸಲು ಪ್ರತಿವರ್ಷವೂ ಅಕ್ಟೋಬರ್ ತಿಂಗಳನ್ನು ವಿಶ್ವ ಸ್ತನ ಕ್ಯಾನ್ಸರ್ ಜಾಗ್ರತಿ ಮಾಸವಾಗಿ ಆಚರಿಸಲಾಗುತ್ತದೆ. ಸ್ತನ ಕೋಶಗಳಲ್ಲಿನ ಡಿ.ಎನ್.ಎ. ರೂಪಾಂತರಗೊಂಡಾಗ ಅಥವಾ ಬದಲಾದಾಗ ಸ್ತನ ಕ್ಯಾನ್ಸರ್ ಉಂಟಾಗುತ್ತದೆ. ಇದು ಜೀವಕೋಶಗಳ ಬೆಳವಣಿಗೆ ಮತ್ತು ವಿಭಜನೆಯನ್ನು ನಿಯಂತ್ರಿಸುವ ನಿರ್ದಿಷ್ಟ ಕಾರ್ಯಗಳನ್ನು ನಿಷ್ಕ್ರಿಯಗೊಳಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಈ ರೂಪಾಂತರಿತ ಕೋಶಗಳು ಸಾಯುತ್ತವೆ ಅಥವಾ ಪ್ರತಿರಕ್ಷಣಾ ವ್ಯವಸ್ಥೆಯಿಂದ ದಾಳಿಗೊಳಗಾಗುತ್ತದೆ. ಆದರೆ ಕೆಲವು ಕೋಶಗಳು ಪ್ರತಿರಕ್ಷಣಾ ವ್ಯವಸ್ಥೆಯಿಂದ ತಪ್ಪಿಸಿಕೊಂಡು ಅನಿಯಂತ್ರಿತವಾಗಿ ಬೆಳೆದು ಸ್ತನದಲ್ಲಿ ಗಡ್ಡೆಯನ್ನು ರೂಪಿಸುತ್ತವೆ. ಸ್ತನ ಕ್ಯಾನ್ಸರ್ ರೋಗವು ಮೊದಲು ಈಜಿಪ್ಟ್ ಭಾಗದಲ್ಲಿ ಬೆಳಕಿಗೆ ಬಂದಿತು ಹಾಗೂ 4200 ವರ್ಷಗಳಿಗಿಂತ ಹಿಂದಿನಿಂದಲೂ ಇದೆ ಎಂದು ಹಳೆಯ ಪುರಾವೆಗಳು ಸಾಬೀತುಪಡಿಸಿವೆ.

### ಸ್ತನ ಕ್ಯಾನ್ಸರ್‌ನ ಲಕ್ಷಣಗಳು:

- ಸ್ತನದಲ್ಲಿ ಗಟ್ಟಿ ಅಥವಾ ಮೊಟ್ಟೆಯಂತಿರುವ ಉಬ್ಬು ಕಾಣುವುದು.
- ಸ್ತನದ ಆಕಾರ ಅಥವಾ ಗಾತ್ರದಲ್ಲಿ ಬದಲಾವಣೆ.
- ತ್ವಚೆಯಲ್ಲಿ ಬದಲಾಗುವುದು ಅಥವಾ ಗಟ್ಟಿಯಾಗುವುದು.
- ನಿಪಲ್ ನಿಂದ ದ್ರವ ಬರುತ್ತಿರುವುದು.
- ಸ್ತನ ಅಥವಾ ಕಕ್ಷ ಪ್ರದೇಶದಲ್ಲಿ ನೋವು ಅಥವಾ ಉಬ್ಬು.

### ಸ್ತನ ಕ್ಯಾನ್ಸರ್ ಉಂಟಾಗಲು ಕಾರಣಗಳು

**ತೂಕದಲ್ಲಿ ಏರಿಕೆ:** ಋತು ಬಂಧದ ನಂತರ ಅಧಿಕ ತೂಕ ಅಥವಾ ಬೊಜ್ಜುತನದಿಂದ ಉಂಟಾಗುವ ಅಥವಾ ಹದಗೆಡುವ ರೋಗಗಳು ಮತ್ತು ಪರಿಸ್ಥಿತಿಗಳ ಪಟ್ಟಿಯಲ್ಲಿ ಸ್ತನ ಕ್ಯಾನ್ಸರ್ ಸೇರಿದೆ.

**ಜೀನ್ಸ್ ಬದಲಾವಣೆ:** ಶೇ.10ರಷ್ಟು ಸ್ತನ ಕ್ಯಾನ್ಸರ್ ಜೀನ್ಸ್ ಬದಲಾವಣೆಗಳಿಂದ, ಪೋಷಕರಿಂದ ಹರಡುವ ರೂಪಾಂತರಗಳ ಮೂಲಕ ಅನುವಂಶಿಕವಾಗಿ ಬರುತ್ತದೆ. ಉದಾಹರಣೆಗೆ ಬಿ.ಆರ್.ಸಿ.ಎ 1 ಮತ್ತು ಬಿ.ಆರ್.ಸಿ.ಎ 2 ರೂಪಾಂತರಗಳು. ಕುಳ್ಳಗಿರುವ ಮಹಿಳೆಯರಿಗಿಂತ ಎತ್ತರದ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು ಎಂಬ ವಾದವಿದೆ.

**ಗರ್ಭಿಣಿಯರ ನಿರ್ಲಕ್ಷ:** ಗರ್ಭಿಣಿಯರು ಮಗುವಿಗೆ ಎದೆ ಹಾಲನ್ನು ನೀಡದೆ ಇರುವುದು. ಪ್ರಸವದ ನಂತರ ಸುರಕ್ಷಿತವಾಗಿ ಆರೈಕೆ ಮಾಡಿಕೊಳ್ಳದೆ ಇರುವುದು.

**ಮಧ್ಯಪಾನ ಮತ್ತು ಧೂಮಪಾನ:** ಮಧ್ಯಪಾನ ಮಾಡದ ಮಹಿಳೆಯರಿಗೆ ಹೋಲಿಸಿದರೆ ಆಲ್ಕೋಹಾಲ್ ಯುಕ್ತ ಆಹಾರ ಬಳಸುವ ಮಹಿಳೆಯರಲ್ಲಿ ಶೇ.7ರಿಂದ 10ರಷ್ಟು ರೋಗ ಹರಡುವ ಸಂಭವ ಅಧಿಕವಾಗಿರುತ್ತದೆ.

**ಹಾರ್ಮೋನ್ ಥೆರಪಿ:** ಮಹಿಳೆಯರು ದೈಹಿಕ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಬರದಲ್ಲಿ ಅಪರಿಮಿತ ಚುಚ್ಚುಮದ್ದುಗಳನ್ನು ತೆಗೆದುಕೊಳ್ಳುತ್ತಿರುವುದು ರೋಗ ಹೆಚ್ಚಳಕ್ಕೆ ಕಾರಣವಾಗಿದೆ.

### ಸ್ತನ ಕ್ಯಾನ್ಸರ್ ತಡೆಗಟ್ಟುವಿಕೆ ಹೇಗೆ ?



**ನಿಯಮಿತ ತಪಾಸಣೆ:** ಸ್ತನಗಳಲ್ಲಿ ಯಾವದೇ ಬದಲಾವಣೆ ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು.

**ಆರೋಗ್ಯಕರ ಆಹಾರ :** ರಾಸಯಾನಿಕ ಮುಕ್ತ ಆಹಾರ ಸೇವಿಸುವುದು ಉತ್ತಮ, ಹಾಗೂ ಎಣ್ಣೆ ಪದಾರ್ಥಗಳಿಂದ ದೂರವಿರುವುದು

**ವ್ಯಾಯಮ ಮತ್ತು ತೂಕ ನಿಯಂತ್ರಣ :** ದಿನನಿತ್ಯ ಕನಿಷ್ಠ 30 ನಿಮಿಷ ನಡೆಯುವುದು, ಯೋಗ, ವ್ಯಾಯಾಮ ಮಾಡುವ ಮೂಲಕ ದೇಹದ ತೂಕ ನಿಯಂತ್ರಿಸಿ ಸ್ತನ ಕ್ಯಾನ್ಸರ್ ತಡೆಯುವುದು.

**ಮದ್ಯಪಾನ ಮತ್ತು ಧೂಮಪಾನದಿಂದ ದೂರವಿರಿ:** ಮದ್ಯಪಾನ ಮತ್ತು ಧೂಮಪಾನ ಮಾಡುವುದರಿಂದ ದೇಹದ ಹಾರ್ಮೋನ ಕೆಡಿಸಿ ಕ್ಯಾನ್ಸರ್ ಹುಟ್ಟಲು ಕಾರಣವಾಗುತ್ತದೆ. ಇದರಿಂದ ದೂರವಿರಿ.

**ಮಾನಸಿಕ ಒತ್ತಡ ಮತ್ತು ಶಾಂತಿ ನಿಯಂತ್ರಣ:** ಪ್ರತಿದಿನ ಯೋಗ, ವ್ಯಾಯಾಮ, ನಡಿಗೆ ಮೂಲಕ ತಡೆಯುವುದು.

### ಸ್ತನ ಕ್ಯಾನ್ಸರ್‌ಗೆ ಚಿಕಿತ್ಸೆಗಳು

**ಕೀಮೋಥೆರಪಿ:** ಕ್ಯಾನ್ಸರ್ ಮರಳುವ ಅಪಾಯ ಹೆಚ್ಚಿದ್ದರೆ ಶಸ್ತ್ರಚಿಕಿತ್ಸೆ ಅಥವಾ ವಿಕಿರಣ ಚಿಕಿತ್ಸೆಯ ನಂತರ ಕ್ಯಾನ್ಸರ್ ಅನ್ನು ಕುಗ್ಗಿಸಲು ಕೀಮೋಥೆರಪಿಯನ್ನು ಬಳಸಬಹುದು. ಕ್ಯಾನ್ಸರ್ ಪಾಸಿಟಿವ್ ಆಗಿದ್ದರೆ ಅಥವಾ ಹಾರ್ಮೋನ್ ಚಿಕಿತ್ಸೆಗೆ ಪ್ರತಿಕ್ರಿಯಸದಿದ್ದರೆ ಸಹ ಇದನ್ನು ಬಳಸಬಹುದು.

**ರೇಡಿಯೊಥೆರಪಿ (ವಿಕಿರಣ ಚಿಕಿತ್ಸೆ):** ಸ್ತನ ಸಂರಕ್ಷಣಾ ಶಸ್ತ್ರ ಚಿಕಿತ್ಸೆಯ ನಂತರ ಪತ್ತೆಯಾಗದ ಯಾವುದೇ ಕ್ಯಾನ್ಸರ್ ಅನ್ನು ನಾಶಮಾಡಲು ವಿಕಿರಣ ಚಿಕಿತ್ಸೆಯನ್ನು ಶಿಫಾರಸ್ಸು ಮಾಡಲಾಗುತ್ತದೆ.

**ಹಾರ್ಮೋನ್ ಚಿಕಿತ್ಸೆ:** ದೇಹದಲ್ಲಿನ ಸ್ತ್ರೀ ಹಾರ್ಮೋನ್‌ಗಳ ಮಟ್ಟವನ್ನು ಕಡಿಮೆ ಮಾಡಲು ಔಷಧಿಗಳನ್ನು ಬಳಸುತ್ತದೆ.ಇದು ಹಾರ್ಮೋನ್ ಗ್ರಾಹಕ ಧನಾತ್ಮಕ ಕ್ಯಾನ್ಸರ್ ಕೋಶಗಳ ಬೆಳವಣಿಗೆಯನ್ನು ನಿಲ್ಲಿಸಲು ಅಥವಾ ನಿಧಾನಗೊಳಿಸಲು ಸಹಾಯ ಮಾಡುತ್ತದೆ.

**ರಾಸಾಯನ ಚಿಕಿತ್ಸೆ :** ಔಷಧಿಗಳ ಮೂಲಕ ಕ್ಯಾನ್ಸರ್ ಕೋಶಗಳನ್ನು ನಾಶಪಡಿಸಲಾಗುತ್ತದೆ. ಕೆಲವು ವೇಳೆ ಶಸ್ತ್ರ ಚಿಕಿತ್ಸೆಗೆ ಮೊದಲು ಅಥವಾ ನಂತರ ಮತ್ತೆ ಬರದಂತೆ ಕೊಡಲಾಗುತ್ತದೆ.

**ಟಾರ್ಗೆಟೆಡ್ ಥೆರಪಿ:** ಕ್ಯಾನ್ಸರ್‌ಗಳಿಗೆ ವಿಶೇಷ ಔಷಧ ನೀಡಲಾಗುತ್ತದೆ. ಇದು ಕ್ಯಾನ್ಸರ್ ಕೋಶಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

**ಇಮ್ಯೂನೋಥೆರಪಿ:** ಶರೀರದ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಿ ಕ್ಯಾನ್ಸರ್ ಕೋಶಗಳ ವಿರುದ್ಧ ಹೋರಾಡುತ್ತದೆ.

**ಪೋಷಕ ಚಿಕಿತ್ಸೆ:** ಪೌಷ್ಠಿಕ ಆಹಾರ, ವ್ಯಾಯಾಮ, ಮನಃಶಾಂತಿ ಮತ್ತು ನಿಯಮಿತ ತಪಾಸಣೆ ಬಹಳ ಮುಖ್ಯ ಹಾಗೂ ಸೂಕ್ತ ಸಮಯದಲ್ಲಿ ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳುವುದರಿಂದ ರೋಗ ನಿಯಂತ್ರಣ ಸಾಧ್ಯ.

## ವಿದ್ಯಾರ್ಥಿಗಳ ಕುಂಚದಲ್ಲರಳಿದ ಚಿತ್ರಗಳು...



ಯಲ್ಲಾಪುರ ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಮೂಹದಲ್ಲಿ 'ಸಂಭ್ರಮ 2025' ಕಾರ್ಯಕ್ರಮದ ಅಂಗವಾಗಿ ಸಂಸ್ಥೆಯ ಕನ್ನಡ ಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಯಿತು.ಮಕ್ಕಳಿಗೆ ಪ್ರಕೃತಿ ವಿಕೋಪ ಎಂಬ ವಿಷಯವನ್ನು ನೀಡಲಾಗಿದ್ದು, ಒಟ್ಟು 37 ಜನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು

## ರಂಗು ರಂಗಿನ ರಂಗೋಲಿ ಚಿತ್ತಾರ...



ಯಲ್ಲಾಪುರ: ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಮೂಹದಲ್ಲಿ 'ವಿಶ್ವದರ್ಶನ ಸಂಭ್ರಮ 2025'ರ ಅಂಗವಾಗಿ ವಿಶ್ವದರ್ಶನದ ಕನ್ನಡ ಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ರಂಗೋಲಿ ಸ್ಪರ್ಧೆಯನ್ನು ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸಭಾಭವನದಲ್ಲಿ ಏರ್ಪಡಿಸಲಾಯಿತು. ಮಕ್ಕಳಿಗೆ ಚುಕ್ಕಿ ರಂಗೋಲಿಗಳನ್ನು ಹಾಕುವುದಾಗಿ ಹೇಳಿದ್ದು, ಒಟ್ಟು 41 ಜನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

# ಕಣ್ಣೀರ ಕೂಪದಲ್ಲಿ ಶರಾವತಿ

**ಮೊದಲ ಪುಟದಿಂದ...**



ಯೋಜನೆಗೆ ಅಗತ್ಯವಾದ ಮರಗಳನ್ನು ಶರಾವತಿ ನದಿಯಿಂದ ಎತ್ತಲಾಗುತ್ತಿದೆ. ಉದ್ದೇಶದ ಮರಳು ತೆಗೆಯುವ ಪ್ರದೇಶವು ಶರಾವತಿ ಸಿಂಗಳಿಕ ಅಭಯಾರಣ್ಯದ ಸೂಕ್ಷ್ಮ ಪ್ರದೇಶದಲ್ಲಿ ಬರುತ್ತದೆ. ಈ ಪ್ರದೇಶವನ್ನು ಅರಣ್ಯದ ಇತರ ಉದ್ದೇಶಗಳಿಗೆ ಬಳಸುವಂತಿಲ್ಲ ಎಂದು ಪರಿಸರ ಸೂಕ್ಷ್ಮ ಪ್ರದೇಶದ ನಿಯಮ 2023ರಲ್ಲಿ ಸ್ಪಷ್ಟಪಡಿಸಲಾಗಿದೆ. 2016ರಲ್ಲಿ ಹೊರಡಿಸಿದ್ದ ಸುಸ್ಥಿರ ಮರಳು ಗಣಿಗಾರಿಕಾ ನಿರ್ವಹಣಾ ಅಧಿಸೂಚನೆಯನ್ನು ಕಡೆಗಣಿಸಲಾಗಿದೆ. ವಿದ್ಯುತ್ ಪ್ರಸರಣದಲ್ಲಿ ಆಗುವ ಸೋರಿಕೆ ಶೇಕಡಾ 10 ರಿಂದ ಶೇಕಡ 15ರಷ್ಟಿದೆ. 145 ಹೆಕ್ಟೇರ್ ಅಭಯಾರಣ್ಯ 15000 ಮರಗಳು ನಾಶವಾಗುವ ಸಾಧ್ಯತೆ ಇದೆ. ಹಾಗೆ ಪುರಾತತ್ವ ಸ್ಮಾರಕಗಳು ನಾಶವಾಗುತ್ತವೆ

ಯೋಜನೆಯ ಅಡಿಯಲ್ಲಿ ಶರಾವತಿ ಕಣಿವೆಯ ಸುತ್ತಮುತ್ತಲಿನ ಕೆಲವು ಹಳ್ಳಿಗಳು ಭಾಗಶಃ ಅಥವಾ ಸಂಪೂರ್ಣವಾಗಿ ಜಲಾವೃತಗೊಳ್ಳುವ ಸಾಧ್ಯತೆ ಇರುವುದರಿಂದ ಈ ಪ್ರದೇಶದ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಯೋಜನೆ ಸರ್ಕಾರ ಹಾಕಿಕೊಂಡಿದೆ. ಹಾಗೆ ಪುನರ್ವಸತಿ ಯೋಜನೆ, ಭೂಮಿ ಕಳೆದುಕೊಂಡ ರೈತರಿಗೆ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಪರಿಹಾರ ನೀಡಲಾಗುತ್ತದೆ ಎಂಬ ಭರವಸೆಯನ್ನು ಸರ್ಕಾರ ನೀಡಿದೆ. ಆದರೂ ಸರ್ಕಾರ ಸ್ಪಷ್ಟವಾದ ಮಾಹಿತಿಯನ್ನು ಜನರಿಂದ ಉದ್ದೇಶಪೂರ್ವಕವಾಗಿ ಮರೆಮಾಚುತ್ತಿದೆ.

ಒಂದು ಕಾಲದಲ್ಲಿ ಚಾಮರಾಜನಗರ ಮತ್ತು ಉತ್ತರ ಕನ್ನಡದ ನಡುವೆ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದ ಆನೆಗಳ ಕಾರಿಡಾರ 50 ವರ್ಷಗಳ ಹಿಂದೆಯೇ ಕಡಿತಗೊಂಡಿದೆ. ಕಾಡೆಮ್ಮೆ, ಕಾಡುಕೋಣಗಳು ನಾಡಿಗೆ ನುಗ್ಗುತ್ತಿವೆ. ಅಪರೂಪದ ಸಿಂಗಳಿಕ ಮಂಗಟೇ ಪಕ್ಷಿ ಸಹ ಅಳಿವಿನ ಹಂಚಿಕೆ ಸೇರಿದೆ. ಕಣ್ಣಿಗೆ ಕಾಣದ ಆದರೆ ಪಶ್ಚಿಮಘಟ್ಟವನ್ನು ಸಮೃದ್ಧಗೊಳಿಸಿದ ಬಹಳಷ್ಟು ಜೀವಿಗಳು ವಿನಾಶವಾಗಿವೆ. ಈಗ ಮತ್ತಷ್ಟು ಯೋಜನೆಗಳನ್ನು ತಂದಲ್ಲಿ ಜಿವ ವೈವಿಧ್ಯ ಸಂಪೂರ್ಣ ನಾಶವಾಗುತ್ತದೆ. ಎಂಬ ಆತಂಕ ಸ್ಥಳೀಯರಲ್ಲಿ ಇದೆ. ಹೀಗಾಗಿ ಶರಾವತಿ ನದಿ ಉಳಿಸಿ ಹೋರಾಟ ಒಕ್ಕೂಟ ಮತ್ತೊಂದು ಹೋರಾಟ ನಡೆಸುತ್ತಿದ್ದಾರೆ. ಅದರಲ್ಲಿ ಸ್ಥಳೀಯರು, ಯುವಜನತೆ, ವಿದ್ಯಾರ್ಥಿಗಳು, ಮಠಾಧಿಪತಿಗಳು, ಪರಿಸರ ಪ್ರೇಮಿಗಳು,ಸಾಮಾಜಿ-ಕ ಕಳಕಳಿ ಹೊಂದಿದವರು, ರಾಜಕಾರಣಿಗಳು, ತೀವ್ರವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಜನಸಾಮಾನ್ಯರ ವಿರೋಧ ಗೇರುಸೊಪ್ಪ ಭಾಗದಲ್ಲಿ ಮಠಾಧೀಶ್ವರರ ನೇತೃತ್ವದಲ್ಲಿ ಸರಣಿ ಪ್ರತಿಭಟನೆಗಳು ನಡೆಯುತ್ತಿವೆ. ಕಳೆದ ತಿಂಗಳ ಹಾದಿಯಲ್ಲಿ ಹೊನ್ನಾವರದಲ್ಲಿ ಈ ಯೋಜನೆಯ ವಿರುದ್ಧವಾಗಿ ಜನ ಸಂಘಟಿತರಾಗಿ ಹೋರಾಟ ಮಾಡಿದ್ದರು. ಗೇರುಸೊಪ್ಪದ ಬಂಗಾರಮಕ್ಕಿಯ ಮಾರುತಿ ಗುರೂಜಿ.' ಯೋಜನೆ ಮಾಡುವುದಿದ್ದರೆ, ನನ್ನ ಎದೆಯ ಮೇಲೆ ಮೊದಲು ಜೆಸಿಬಿ ಹತ್ತಿಸಿ, ನಂತರದಲ್ಲಿ ಯೋಜನೆ ಮಾಡಿ' ಎಂದು ಗುಡುಗಿದ್ದು ಈ ವರದಿಯಾಗಿದೆ.' ಕರ್ನಾಟಕ ಅರಣ್ಯ ಇಲಾಖೆ ಈ ಯೋಜನೆಗೆ ಅನುಮತಿ ನೀಡಲು ಇಷ್ಟವಿರಲಿಲ್ಲವಾದರೂ ರಾಜಕೀಯ ಒತ್ತಡದಿಂದ ಈ ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು' ಎಂದು ವನ್ಯಜೀವಿ ಕಾರ್ಯಕರ್ತರ ಮತ್ತು ಎಸ್. ಪಿ.ಡಬ್ಲ್ಯೂನ ಮಾಜಿ ಸದಸ್ಯ ಜೋಸೆಫ್ ಅವರು ಹೇಳಿದರು. ಬಿಜೆಪಿಯ ಸಂಸದರು, ಮಾಜಿ ಶಾಸಕರು ಹೋರಾಟಕ್ಕೆ ಬೆಂಬಲವನ್ನು ನೀಡಿದ್ದಾರೆ. ಅ.15 ರಂದು ಸಾಗರದಲ್ಲಿ ಬಹಿರಂಗ ಸಭೆ ಮಾಡುತ್ತೇವೆ. ರಾಜ್ಯದ ಮೂಲೆ ಮೂಲೆಯಿಂದ ರೈತರು, ಹೋರಾಟಗಾರರು ಬರುತ್ತಾರೆ. ಒಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪನವರು ಇಲ್ಲಿಗೆ ಬಂದು, ಯೋಜನೆಗೆ ಸಂಬಂಧಿಸಿದಂತೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ದಿನೇಶ್ ಶಿರವಾಳ್ ಹೇಳಿದರು.


# ದೇಶ ಮೆಚ್ಚಿದ ನಾಯಕ ಡಾ. ಕಲಾಂ

ಒಂದು ಕಾಲದಲ್ಲಿ ಮೇಲೆ ನಿಂತು ಆಕಾಶದಲ್ಲಿ ಹಾರಾಡುವ ವಿಮಾನವನ್ನು ಆಶ್ಚರ್ಯ ಚಕಿತನಾಗಿ ನೋಡುತ್ತಿದ್ದ ಅವರು ಕೊನೆಗೆ ಅವರೇ ವಿಮಾನದಲ್ಲಿ ಒಡಾಡುವಷ್ಟು ಸಾಧನೆ ಮಾಡಿದರು. "ಪೀಪಲ್ಸ್ ಪ್ರೆಸಿಡೆಂಟ್" ಎಂಬ ಜನರಿಂದ, ಭಾರತ ರತ್ನ ಪ್ರಶಸ್ತಿಗೆ ಭಾರತ ಸರ್ಕಾರದಿಂದ, ತಾಂತ್ರಿಕ ಕ್ಷೇತ್ರದಲ್ಲಿ ಗಳಿಸಿದ ಹೆಸರು "ಮಿಸೈಲ್ ಮ್ಯಾನ್", ಅವರು ಬದುಕಿದ ರೀತಿ ಕಾಮನ್ ಮ್ಯಾನ್ ಅವರೇ ಬಾಹ್ಯಾಕಾಶ ವಿಜ್ಞಾನಿ, ಲೇಖಕ ಮತ್ತು ರಾಜಕಾರಣಿಗಳಾದ ಎ ಪಿ ಜೆ ಅಬ್ದುಲ್ ಕಲಾಂ.

ಭಾರತದ ಕ್ಷಿಪಣಿ ಮನುಷ್ಯ ಎಂದು ಕರೆಯಲ್ಪಡುವ ಡಾ. ಅವುಲ್ ಫಕೀರ್ ಜೈನುಲಾಬ್ದೀನ್ ಅಬ್ದುಲ್ ಕಲಾಂ 15 ಅಕ್ಟೋಬರ್ 1931 ತಮಿಳುನಾಡಿನ ರಾಮೇಶ್ವರಂನಲ್ಲಿ ಜನಿಸಿದರು. ಈ ದಿನವನ್ನು ಕಲಾಂ ಅವರ ಜನ್ಮ ದಿನದ ಗೌರವಾರ್ಥವಾಗಿ ಆಚರಿಸಲಾಗುತ್ತದೆ. ಕಲಾಂ ಅವರ ನಿಸ್ವಾರ್ಥ ಸೇವೆ ಭಾರತಕ್ಕೆ ಅಪಾರ ಕೊಡುಗೆಯನ್ನು ನೀಡಿದೆ.

1998ರಲ್ಲಿ ಭಾರತವನ್ನು ಪರಮಾಣು ಶಸ್ತ್ರಾಸ್ತ್ರ ರಾಷ್ಟ್ರವನ್ನಾಗಿ ಮಾಡಿದ ಪರಮಾಣು ಇಂಧನ ಇಲಾಖೆಯ ಸಹಯೋಗದೊಂದಿಗೆ ನಡೆದ ಪೋಖ್ರಾನ್ -2 ಪರಮಾಣು ಪರೀಕ್ಷೆಗಳಲ್ಲಿ ಅವರು ಪ್ರಮುಖ ಸಾಂಸ್ಥಿಕ, ತಾಂತ್ರಿಕ ಮತ್ತು ರಾಜಕೀಯ ಪಾತ್ರವನ್ನು ವಹಿಸಿದ್ದರು. ವಿಜ್ಞಾನ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅದರಲ್ಲಿ ಅವರ ಆತ್ಮಕಥನ "ಬೆಂಕಿಯ ರೆಕ್ಕೆಗಳು" ಅದ್ಭುತವಾಗಿದೆ.

ಭಾರತದ ಪ್ರಖ್ಯಾತ ವಿಜ್ಞಾನಿಗಳಲ್ಲಿ ಒಬ್ಬರಾಗಿದ್ದರು. 48 ಭಾರತ ಮತ್ತು ವಿದೇಶ ವಿಶ್ವವಿದ್ಯಾನಿಲಯದ ಸಂಸ್ಥೆಗಳಿಂದ ಗೌರವ ಡಾಕ್ಟರೇಟ್ ಪದವಿಗಳನ್ನು ಪಡೆದ ವಿಶಿಷ್ಟ ಗೌರವವನ್ನು ಹೊಂದಿದ್ದರು. ಅವರಿಗೆ ಪದ್ಮಭೂಷಣ, ಪದ್ಮವಿಭೂಷಣ ಮತ್ತು ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿಗಳನ್ನು ನೀಡಲಾಯಿತು. 2002ರಲ್ಲಿ ಅವರು ಭಾರತದ 11ನೇ ರಾಷ್ಟ್ರಪತಿಯಾದರು. ಅವರಿಗೆ ಎಷ್ಟು ಪ್ರಶಸ್ತಿಗಳು ಕೊಟ್ಟರೂ ಕಡಿಮೆ ಎನ್ನಬಹುದು.



**ಅಕ್ಟೋಬರ್ 15 ಡಾ. ಅಬ್ದುಲ್ ಕಲಾಂ ಜನ್ಮದಿನ**

ಒಂದು ಕಾಲದಲ್ಲಿ ಮನೆ-ಮನೆಗೆ ದಿನಪತ್ರಿಕೆ ಹಾಕಿ,ಇನ್ನಿತರೆ ಕಾರ್ಯಗಳನ್ನು ನಿರ್ವಹಿಸಿ ಬಂದ ದುಡ್ಡಿನಿಂದ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದ ಸ್ವಾಭಿಮಾನಿ. ಪ್ರಸಿದ್ಧ ಸುದ್ದಿಪತ್ರಿಕೆಗಳಲ್ಲಿ ಮತ್ತು ವಾಹಿನಿಗಳಲ್ಲಿ ಹಾಗೆ ಸಮಾಜ ಗುರುತಿಸುವಷ್ಟು ಮಟ್ಟಿಗೆ ತಮ್ಮ ವ್ಯಕ್ತಿತ್ವದ ಮತ್ತು ಸಾಧನೆಯ ಛಾಪನ್ನು ಮೂಡಿಸಿದ್ದರು.


ಕಲಾಂ ಅವರು ಶಿಲ್ಲಾಂಗನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜಮೆಂಟ್ನಲ್ಲಿ "ಕ್ರಿಯೇಟಿಂಗ್ ಎ ಲೀವೇಬಲ್ ಪ್ಲಾನೆಟ್ ಅರ್ಥ" ಕುರಿತು ಉಪನ್ಯಾಸ ನೀಡಲು ಜುಲೈ 27, 2015ರಂದು ಪ್ರಯಾಣ ಬೆಳೆಸುತ್ತಾರೆ. ಉಪನ್ಯಾಸದ ನಡುವೆ ಕಲಾಂ ಅವರ ಪ್ರಾಣಪಕ್ಷಿ ಹಾರಿಹೋಯಿತು. ಅವರ ಸಾವಿನಲ್ಲೂ ಕೂಡ ಅವರ ಕರ್ತವ್ಯವನ್ನು ಮೆರೆದಿದ್ದಾರೆ. ಅವರ ಜೀವನವನ್ನು ಬಹಳ ಸರಳ ರೀತಿಯಲ್ಲಿ ಬದುಕಿಸಿ ತೋರಿಸಿದ್ದಾರೆ.

"ದೊಡ್ಡ ಗುರಿ,ಜ್ಞಾನ ಹೆಚ್ಚಿಸಿಕೊಳ್ಳುವುದು, ಕಠಿಣ ಪರಿಶ್ರಮ ಮತ್ತು ದೃಢ ನಿಷ್ಠೆ ಇವುಗಳನ್ನು ನೀವು ನಿರಂತರವಾಗಿ ಪಾಲಿಸಿದರೆ ಜೀವನದಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು", ಎಂಬ ಸಾಧನೆಯ ಸೂತ್ರವನ್ನು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಅವರು ಹೆಚ್ಚಾಗಿ ವಿದ್ಯಾರ್ಥಿಗಳ ಜೊತೆ ಕಳೆಯಲು ಇಚ್ಛಿಸುತ್ತಿದ್ದರು. ಅದಕ್ಕೆ ಅವರು ದೇಶದ ಹೊಸ ಕನಸುಗಳು ಇಲ್ಲಿವೆ, ಅದಕ್ಕೆ ಸ್ಫೂರ್ತಿ ತುಂಬುವ ಕಾರ್ಯವನ್ನು ಮಾಡಬೇಕಾಗಿರುವುದು ನಮ್ಮ ಕರ್ತವ್ಯ ಎಂದಿದ್ದಾರೆ. ಅವರ ಸರಳ ಜೀವನ ಮತ್ತು ಪ್ರಾಮಾಣಿಕತೆಗೆ ಎಲ್ಲರೂ ಅವರನ್ನು ಪ್ರೀತಿಸುವಂತೆ ಮಾಡಿದೆ.

ಕೇವಲ ಯಶಸ್ಸಿನ ಕಥೆಗಳನ್ನೇ ಹೆಚ್ಚು ಓದಬೇಡಿ. ಏಕೆಂದರೆ ಯಶಸ್ಸಿನ ಕಥೆಗಳಲ್ಲಿ ನಮಗೆ ಸಂದೇಶಗಳಷ್ಟೇ ಸಿಗುತ್ತದೆ. ಸೋಲಿನ ಕಥೆಗಳನ್ನು ಓದಿ, ನಾವು ಯಶಸ್ವಿಯಾಗಲು ಉತ್ತಮ ಚಿಂತನೆಗಳು ಕುಡಿಯೊಡೆಯುತ್ತದೆ, ಅಂತಹವರ ಸಾಲಿನಲ್ಲಿ ಕಲಾಂ ಅವರು ಒಬ್ಬರು. "ಗೆದ್ದಾಗ ಅಹಂ ಪಟ್ಟವನು ಉಳಿಯಲಾರ, ಸೋತಾಗ ಕುಸಿದು ಹೋದವನು ಬೆಳೆಯಲಾರ. ಗೆಲುವಿನ ಸಂಭ್ರಮ ನೆತ್ತಿಗೆ ಏರದಿರಲಿ, ಸೋಲಿನ ನೋವು ಮನಸಿಗೆ ತಾಕದಿರಲಿ" ಎಂಬ ಸ್ಫೂರ್ತಿ ತುಂಬುವ ಮಾತುಗಳು ಎಷ್ಟೋ ಕನಸುಗಳಿಗೆ ದಾರಿದೀಪವಾಗಿದೆ.



# ಬೆಳಕಿನ ಹಬ್ಬ ದೀಪಾವಳಿ



ದೀಪಾವಳಿ ನಮ್ಮ ಸನಾತನ ಸಂಸ್ಕೃತಿಯ ಅತ್ಯಂತ ಪ್ರಸಿದ್ಧವಾದಂತಹ ಹಬ್ಬ. ಭಾರತದಲ್ಲೇ ಅಲ್ಲ, ವಿಶ್ವವಿಖ್ಯಾತ ಅಗಿರುವಂತಹ ಹಬ್ಬ. ದುಷ್ಟನಾದ ನರಕಾಸುರನನ್ನು ಶ್ರೀ ಕೃಷ್ಣನು ಸಂಹಾರ ಮಾಡಿ ಭೂಮಿಯಲ್ಲಿ ಸುಟ್ಟು ಹಾಕಿದಾಗ ದೇಹ ರಾಸಾಯನಿಕದಿಂದ ಬಣ್ಣ ಬಣ್ಣವಾಗಿ ಸಿಡಿಯಿತು. ಈ ಉದ್ದೇಶಕ್ಕಾಗಿ ದೀಪಾವಳಿ ಸಮಯದಲ್ಲಿ ಪಟಾಕಿ ಹಚ್ಚುತ್ತಾರೆ ಎನ್ನುವುದು ಒಂದು ಪ್ರತೀಕ.

ಅಪಾಯಕಾರಿ ಪಟಾಕಿಗಳಲ್ಲಿ ಬೇರಿಯಂ ಮತ್ತು ನೈಟ್ರೇಟ್‌ನಂತಹ ಹಾನಿಕಾರಕ ರಾಸಾಯನಿಕಗಳು ಇರುತ್ತವೆ. ಇದರಿಂದ ಅನೇಕ ಅವಗಢಗಳು ಸಂಬವಿಸಿವೆ. ಹಾಗೇ ಪರಿಸರ ಮಾಲಿನ್ಯ ಆಗುತ್ತದೆ. ಅದರ ಬದಲು ಹಸಿರು ಪಟಾಕಿಗಳು ಬೆಳಕಿಗೆ ಬಂದಿವೆ .

ಹಸಿರು ಪಟಾಕಿಗಳು ನೀರಿನಲ್ಲಿ ಕರಗಬಲ್ಲ ಥರ್ಮೈಟ್ ಮತ್ತು ಅಲ್ಯೂಮಿನಿಯಂ ಸಣ್ಣ ಕಣಗಳಿಂದ ಮಾಡಲಾಗುತ್ತದೆ. ಪಟಾಕಿ ಹೊರಭಾಗಕ್ಕೆ ಸುತ್ತಿದ ಹಸಿರು ಬಣ್ಣಕ್ಕೆ ಹಸಿರು ಪಟಾಕಿ ಎನ್ನುವುದಿಲ್ಲ. ಸಿಡಿದಾಗ ಅತಿಯಾದ ಹೊಗೆ, ಶಬ್ದ ಮಾಲಿನ್ಯ ತಡೆಯುವ ಪರಿಸರ ಸ್ನೇಹಿ ಪಟಾಕಿಯಾಗಿದೆ. ಹಸಿರು ಪಟಾಕಿ ಕಂಡುಹಿಡಿಯುವುದು ಬಹಳ ಸುಲಭ. ಯಾವ ಪಟಾಕಿ ಹಸಿರು ಬಣ್ಣದ ಬೆಳಕು ಬರುವುದಿಲ್ಲವೋ, ಪಟಾಕಿ ಮೇಲಿರುವ ಕ್ಯೂ. ಆರ್.ಕೋಡ್ ಮೂಲಕ ಸ್ಕ್ಯಾನ್ ಮಾಡುವುದರ ಮೂಲಕ ಕಂಡು ಹಿಡಿಯಬಹುದು. ಇದರಿಂದ ಜನರಿಗೂ ಪಟಾಕಿ ಹಚ್ಚುವುದರಿಂದ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ.

# ಮರೆಯಾಗುತ್ತಿರುವ ಚಿಲಿಪಿಲಿ ಸ್ವರಗಳ ಗುಬ್ಬಿ

ಅರ್ಚನಾ. ನಾಯ್ಕ್



ಬೆಳಿಗ್ಗೆಯಾದರೆ ಸಾಕು ಚಿಲಿಪಿಲಿ ಎಂದು ಕೇಳುವ ಶಬ್ದ ಎತ್ತ ನೋಡಿದರತ್ತ ಮನಯಂಗಳದಲ್ಲಿ ಕಾಣುವ ಸಣ್ಣ ಹಕ್ಕಿ, ಕಾಳು ಕಡ್ಡಿ, ಹುಳ ಹುಪ್ಪಟೆ ತಿನ್ನಲು ಬರುತ್ತಿದ್ದ ಅವುಗಳೇ ಗುಬ್ಬಿ. ಕಂದು ಮತ್ತು ಕಪ್ಪು ಮಿಶ್ರಿತ ಸಣ್ಣ ಪಕ್ಷಿ. ನಮ್ಮ ಮನೆಯ ಭಾಗವೇ ಆಗಿ ಹೋಗಿದ್ದವು ಮನೆಯ ಸೂರಿನಲ್ಲಿ ಪುಟ್ಟದಾದ ಗೂಡು ಕಟ್ಟಿಕೊಂಡು ಜೀವಿಸುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಅವುಗಳು ಕಾಣುವುದೇ ಅಪರೂಪದಲ್ಲಿ ಅಪರೂಪ. ಕಾರಣ ಆಧುನಿಕತೆಯ ಕಡೆಗೆ ಸಾಗುತ್ತಿರುವ ಪ್ರಪಂಚ.

ದಿನದಿಂದ ದಿನಕ್ಕೆ ಡಿಜಿಟಲೀಕರಣ ಗೊಳ್ಳುತ್ತಿರುವ ಪರಿಣಾಮದಿಂದಾಗಿ ರೇಡಿಯೋ ತರಂಗ, ಇಲೆಕ್ಟ್ರಾನಿಕ್ ತರಂಗಗಳು ಹೊರಸೂಸುತ್ತಿರುವ ವಿದ್ಯುತ್ವಾಹಕಗಳಿಂದ ಗುಬ್ಬಿಯಂತಹ ಕೆಲವೊಂದಿಷ್ಟು ಪುಟ್ಟ ಜೀವಿಗಳು ಸಾವನ್ನಪ್ಪುತ್ತಿವೆ. ಸ್ವಂತ ಬಳಗದವರಿಗೆ ತೋರಿಸದ ಸ್ವಾರ್ಥಿ ಜೀವಿ ಮಾನವನು ಇನ್ನು ಪ್ರಾಣಿ ಪಕ್ಷಿಗಳ ಬಗ್ಗೆ ಯೋಚಿಸುತ್ತಾನೆಯೇ..? ಆಧುನಿಕತೆಯೆಡೆಗೆ ಮುಖ ಮಾಡಿ ಇತರ ಜೀವ ರಾಶಿಗಳ ಅಳಿವಿಗೆ ಕಾರಣವಾಗಿದ್ದಾನೆ.

ಇಂದಿನ ಬದಲಾಗುತ್ತಿರುವ ಕಾಲಮಾನದಲ್ಲಿ, ಗುಬ್ಬಿಗಳನ್ನು ನೋಡುವುದು ಇರಲಿ ಅವುಗಳ ಬಗ್ಗೆ ಯೋಚಿಸುವಷ್ಟು ಸಮಯವೂ ಯಾರ ಬಳಿಯಿಲ್ಲ. ಇನ್ನು ಅವುಗಳ ಬಗ್ಗೆ ಯಾರು ಯೋಚಿಸುತ್ತಾರೆ ಸ್ಮಾರ್ಟ್ ಫೋನ್ಗಳ ಬಳಕೆಗಾಗಿ ಕಂಡುಹಿಡಿದ ನೆಟವರ್ಕ್‌ಗಳು ಹೊರಸೂಸುವ ತರಂಗಗಳ ಪ್ರಭಾವದಿಂದಾಗಿ ಗುಬ್ಬಿಗಳ ಸಂತಾನೋತ್ಪತ್ತಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಪರಿಸರನಾಶ ಪ್ರಾಣಿ ಪಕ್ಷಿಗಳ ವಸತಿ, ಆಹಾರ, ವಾಸಸ್ಥಾನವನ್ನು ಕಿತ್ತುಕೊಂಡಿದೆ. ಆಹಾರ ಸರಪಳಿಗೆ ಹೊಡೆತ ನೀಡಿದೆ. ಹೆಚ್ಚಾದ ವಾಹನಗಳ ದಟ್ಟಣೆ ಅವುಗಳಿಗೆ ಸಿಕ್ಕು ಬಲಿಯಾಗುತ್ತಿರುವ ಗುಬ್ಬಿಗಳು ತಮ್ಮ ನೆಲೆ ಕಾಣದೆ ದಿನದಿಂದ ದಿನಕ್ಕೆ ಬೆರಳಣಿಕೆಯಷ್ಟು ಬಂದು ತಲುಪಿವೆ. ಮೊದಲೆಲ್ಲ ಹಂಚಿನ ಹಾಗೂ ಹುಲ್ಲಿನ ಮನೆಯಲ್ಲಿ ಒಂದು ಮೂಲೆಯಲ್ಲಿ ಗೂಡು ಕಟ್ಟಿ ವಾಸಿಸುತ್ತಿದ್ದ ಅವು ಇಂದು ಆಧುನಿಕತೆ ಪರಿಣಾಮವಾಗಿ ತಲೆ ಎತ್ತಿ ನಿಂತಿರುವ ಗಗನ ಚುಂಬಿ ಕಟ್ಟಡಗಳಲ್ಲಿ ಅವಕಾಶವೇ ಸಿಗದಂತಾಗಿ ತತ್ತರಿಸುತ್ತಿವೆ.

ಇನ್ನಾದರೂ ಮಾನವ ಜಾಗೃತರಾಗಿ ಮಾತುಬಾರದ ಮುಗ್ಧ ಗುಬ್ಬಿಯಂತಹ ಪಕ್ಷಿಗಳ ಉಳಿವಿಗಾಗಿ ಪರಿಸರ ರಕ್ಷಣೆಗೆ ಧ್ವನಿಯೆತ್ತಬೇಕು, ಪರಿಸರ ಜಾಗೃತಿ ಮೂಡಿಸಬೇಕು. ಗುಬ್ಬಿಗಳ ಉಳಿವಿಗಾಗಿ ವಿಶೇಷ ತಂಡಗಳನ್ನು ರಚಿಸಿ ಅವುಗಳಿಗೂ ಇತರ ಜೀವ ಸಂಕುಲದ ಹಾಗೆ ಬದುಕುವ ಅವಕಾಶ ಕಲ್ಪಿಸಿ ಕೊಡಬೇಕು...



# ಮ್ಯೂಸಿಯಂ ಸೇರಲಿವೆಯೆ ಡೀಸೆಲ್ ವಾಹನಗಳು.. ?

ಶಶಿಧರ ಮರಾಠಿ

ಇತ್ತೀಚಿನ ದಿನಗಳಲ್ಲಿ ದೆಹಲಿ ಸೇರಿದಂತೆ ದೇಶದ ಅನೇಕ ನಗರಗಳಲ್ಲಿ ಡೀಸೆಲ್ ವಾಹನಗಳನ್ನು ನಿಷೇಧಿಸುವ ಯೋಜನೆಯನ್ನು ಅಲ್ಲಿನ ಸರ್ಕಾರಗಳು ಹೊಂದಿವೆ, ದೆಹಲಿಯಲ್ಲಂತೂ ಹತ್ತು ವರ್ಷಕ್ಕಿಂತ ಹಳೆಯದಾದ ಡೀಸೆಲ್ ವಾಹನಗಳನ್ನು ಈಗಾಗಲೇ ನಿಷೇಧಿಸಲಾಗಿದೆ.

ಭಾರತದ ಬಹುತೇಕ ಟ್ರಕ್, ಬಸ್ ಮುಂತಾದ ಸರಕು ಸಾಗಾಣಿಕೆಯ ವಾಹನಗಳು ಹೆಚ್ಚಾಗಿ ಡೀಸೆಲ್‌ನಿಂದಲೇ ಕಾರ್ಯ ನಿರ್ವಹಿಸುತ್ತವೆ. ಇತರ ಇಂಧನಗಳಿಗೆ ಹೋಲಿಸಿದರೆ ಡೀಸೆಲ್ ಕೊಂಚ ಕಡಿಮೆ ಬೆಲೆಗೆ ದೊರೆಯುವುದು ಹಾಗೂ ಡೀಸೆಲ್ ಆಧಾರಿತ ಇಂಜಿನ್ ಹೊಂದಿರುವ ವಾಹನಗಳು ಪೆಟ್ರೋಲ್ ವಾಹನಕ್ಕಿಂತ ಹೆಚ್ಚು ಕಾಲ ಬಾಳಿಕೆ ಬರುವುದು. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟಗಳಲ್ಲಿ ವಾಣಿಜ್ಯೋದ್ಯಮಗಳು, ಸಾರಿಗೆ ಮಾಲೀಕರು, ಚಿಕ್ಕ ಪುಟ್ಟ ಸರಕು ಸಾಗಣೆಯ ವಾಹನಗಳನ್ನು ಹೊಂದಿರುವವರು ಬಹುತೇಕ ಡೀಸೆಲ್ ವಾಹನವನ್ನೇ ಅವಲಂಬಿಸಿದ್ದಾರೆ. ಹಾಗಾದರೆ ಜನರಿಗೆ ಆರ್ಥಿಕವಾಗಿ ಉಪಯುಕ್ತವಾಗಿರುವ ಇಂತಹ ಡೀಸೆಲ್ ವಾಹನಗಳನ್ನು ಅಲ್ಲಿನ ಸರ್ಕಾರ ನಿಷೇಧಿಸುವುದು ಏಕೆ? ಡೀಸೆಲ್ ನಮ್ಮ ದೇಶಕ್ಕೆ ಮಾರಕವೇ ಎಂಬ ಪ್ರಶ್ನೆ ನಿಮ್ಮಲ್ಲಿರಬಹುದು. ಆರ್ಥಿಕವಾಗಿ ಪ್ರಯೋಜನವನ್ನು ಹೊಂದಿದ್ದರೂ ಜನರ ಆರೋಗ್ಯದ ಮೇಲೆ, ಪರಿಸರದ ಮೇಲೆ ಡೀಸೆಲ್ ವಾಹನಗಳು ಸಾಕಷ್ಟು ಋಣಾತ್ಮಕ ಪರಿಣಾಮ ಬೀರುತ್ತಿವೆ. ಇವು ದೆಹಲಿಯಂತಹ ಹೆಚ್ಚಿನ ಹವಾಮಾನ ಮಾಲಿನ್ಯ ಹೊಂದಿರುವ ಪ್ರದೇಶಗಳಲ್ಲಿ ಇನ್ನಷ್ಟು ಹೊಗೆ ಸೂಸಿ ವಾಯುಮಾಲಿನ್ಯವನ್ನು ಅಧಿಕಗೊಳಿಸುತ್ತಿದೆ. ಈ ವಾಹನಗಳ ಹೊಗೆಯು ಮಕ್ಕಳಲ್ಲಿ ಅಸ್ತಮಾ, ಹೃದಯ ಕಾಯಿಲೆ, ಕ್ಯಾನ್ಸರ್ ಸೇ-ರಿದಂತೆ ಜನರ ಆರೋಗ್ಯದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತಿದೆ. ದೆಹಲಿಯಲ್ಲಿನ ವಾಯುಮಾಲಿನ್ಯಕ್ಕೆ ಡೀಸೆಲ್ ವಾಹನ ಒಂದೇ ನೇರವಾಗಿ ಕಾರಣವಲ್ಲದಿದ್ದರೂ ಮಾಲಿನ್ಯವನ್ನು ಹಂತ ಹಂತವಾಗಿ ನಿಯಂತ್ರಿಸಲು ಈ ಉಪಕ್ರಮ ಉತ್ತಮವಾಗಿದೆ.

ನಮ್ಮ ರಾಜ್ಯದಲ್ಲೂ ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಮಂಗಳೂರು ಸೇರಿದಂತೆ ಬೃಹತ್ ನಗರಗಳಲ್ಲಿ ವಾಯು ಮಾಲಿನ್ಯ ಅಧಿಕವಾಗುತ್ತಿದೆ. ದೆಹಲಿಯಂತೆ ಇಲ್ಲಿಯೂ ಹಂತ ಹಂತವಾಗಿ ಡೀಸೆಲ್ ಅವಲಂಬನೆ ಕಡಿಮೆಗೊಳಿಸಲು ಸರ್ಕಾರ ಪ್ರಯತ್ನಿಸಬೇಕು. 'ಅಚಾತುರ್ಯ ನಡೆಯುವುದಕ್ಕಿಂತ ಮೊದಲು ಅದು ನಡೆಯದಂತೆ ತಡೆಯಲು ಯತ್ನಿಸುವುದು ಉತ್ತಮ ಆಡಳಿತಗಾರನ ಕರ್ತವ್ಯ'. ನಮ್ಮ ರಾಜ-ಕಾರಣಿಗಳೂ ಈ ದಿಸೆಯಲ್ಲಿ ಚಿಂತಿಸಿದಾಗ ಮಾತ್ರ ವಾಯುಮಾಲಿನ್ಯವನ್ನು ನಿಯಂತ್ರಣದಲ್ಲಿಡಲು ಸಾಧ್ಯ.

ಆದರೆ ಕೇವಲ ಡೀಸೆಲ್ ವಾಹನಗಳನ್ನು ನಿಷೇಧಿಸಿದಾಕ್ಷಣ ವಾಯುಮಾಲಿನ್ಯ ನಿಯಂತ್ರಣಕ್ಕೆ ಬರುವುದಿಲ್ಲ ಹಾಗೂ ಈ ರೀತಿಯ ನಿಷೇಧಿಸುವಿಕೆ ಡೀಸೆಲ್ ವಾಹನಗಳ ಮಾಲೀಕರು ನಷ್ಟಕ್ಕೆ ಒಳಗಾಗುವಂತೆ ಮಾಡಬಹುದು. ಆದುದರಿಂದ ಸರ್ಕಾರಗಳು ಡೀಸೆಲ್‌ಗೆ ಪರ್ಯಾಯವಾಗಿ ಎಲೆಕ್ಟ್ರಿಕ್, ಹೈಡ್ರೋಜನ್ ಚಾಲಿತ ಅಥವಾ ಇನ್ನಾವುದೇ ಪರಿಸರಸ್ನೇಹಿ ಹಾಗೂ ಕಡಿಮೆ ವೆಚ್ಚದ ಇಂಧನವನ್ನು ಬಳಸುವ ವಾಹನದ ಬಳಕೆಯನ್ನು ಪ್ರೋತ್ಸಾಹಿಸಬೇಕು. ಅಲ್ಲದೇ ಡೀಸೆಲ್ ವಾಹನವನ್ನು ಎಲೆಕ್ಟ್ರಿಕ್ ಅಥವಾ ಇನ್ನಾವುದೇ ಪರಿಸರಸ್ನೇಹಿ ವಾಹನವಾಗಿ ಬದಲಿಸಿಕೊಳ್ಳಲು ಸಹಾಯಧನ ಒದಗಿಸಬೇಕು. ಇಲ್ಲವಾದಲ್ಲಿ ಸರ್ಕಾರದ ಉಪಕ್ರಮವು ವಿಫಲಗೊಂಡು ಡೀಸೆಲ್ ವಾಹನ ಹೊಂದಿರುವವರು ಮತ್ತು ಅದನ್ನು ಅವಲಂಬಿಸಿದವರು ಸಂಕಷ್ಟಕ್ಕೆ ಒಳಗಾಗುವರು.

ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ದೀಕ್ಷಿತಾ ನಾಯ್ಕ, ಅರ್ಚನಾ ನಾಯ್ಕ, ಶಶಿಧರ ಮರಾಠಿ, ಮನೋಜ ಭಟ್ಟ
ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ-3 ಸಂಚಿಕೆ-1